ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Wednesday, the 30th May, 1979/Jyieshta 9, 1901 S.E.

The House met in the Assembly Chamber, Vidhana Soudha, at Eleven of the Clock.

[MR. SPEAKER (SRI P. VENKATARAMANA) in the Chair.]

STARRED QUESTIONS
(to which oral Answers were given)

Roads formed under minimum need programme in Sagar Taluk

347, SRI L. T. THIMMAPPA HEGDE (Sagar).—Will the Minister for Public Works be pleased to state.—

(a) the number of roads and their length (in mile) formed under minimum need programme in Sagar.

(b) whether it has come to the notice of the Government that there are many villages without communication of those having roads are unfit for traffic.

(c) the period within which the said facilities would be prov-d d.

(d) if the minimum need programme is on the basis of population, whether the Government intend to take up the work by considering the bad condition of the roads and also minimum need of the people, instead of on the basis of population ?

SRI S. BANGARAPPA (Minister for Public Works).—

(a) (i) One road (ii) 6.60 k.m.

(b) Yes.

(c) When the financial position improves.

(d) There is no proposal before the Government to review the existing policy at present.

---

† indicate that remarks or speeches have not been revised by the member concerned.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಎಲ್.ಟಿ.ತಿಮ್ಮಪ್ಪ ಹೆಗ್ಗಡೆಯವರ ಪರವಾಗಿ).—ತಾವು ಜನಸಂಖ್ಯೆಯ ಆಧಾರದ ಮೇಲೆ ಗ್ರಾಮಾಂತರ ಪ್ರದೇಶದಲ್ಲಿ ರಸ್ತೆಯನ್ನು ಮಾಡುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರೋ ? ಅಥವಾ ಎರಡು ಮನೆ ಇದ್ದರೂ ಕೂಡ ಅದು ಕೂಡ ಒಂದು ಊರು ಎಂಬುದಾಗಿ ಪರಿಗಣಿಸಿ ಆ ಊರಿಗೂ ರಸ್ತೆಯ ಸೌಕರ್ಯವನ್ನು ಒದಗಿಸುವ ವಿಷಾಡನ್ನು ಇಟ್ಟುಕೊಂಡಿದ್ದೀರೋ ? ದಯವಿಟ್ಟು ತಿಳಿಸುತ್ತೀರಾ ?

† ಶ್ರೀ ಎಸ್. ಬಂಗಾರಪ್ಪ.—ಮಿನಿಮಮ್ ನೀಡ್ ಪ್ರೋಗ್ರಾಂನಲ್ಲಿ ಜನಸಂಖ್ಯೆಯ ಆಧಾರದ ಮೇಲೆ ರಸ್ತೆಯನ್ನು ಮಾಡಬೇಕೆಂದು ಕೇಂದ್ರ ಸರ್ಕಾರದವರು ಆದೇಶವನ್ನು ಕೊಟ್ಟಿದ್ದಾರೆ. ಅದರಂತೆ ೧,೫೦೦ ಜನಸಂಖ್ಯೆ ಇರತಕ್ಕಂತಹದ್ದಕ್ಕೆ ಒಂದು ಊರು ಎಂಬುದಾಗಿ ಇತ್ತು. ಈಗ ಅದನ್ನು ೧,೦೦೦ ಜನ ಸಂಖ್ಯೆಗೆ ಇಳಿಸಿದ್ದೇವೆಂದೂ ಕೂಡ ಕೇಂದ್ರಸರ್ಕಾರದವರು ತಿಳಿಸಿದ್ದಾರೆ. ಜನಸಂಖ್ಯೆ ಹೆಚ್ಚು ಇದ್ದು ಆ ಊರಿಗೆ ರಸ್ತೆ ಸಂಪರ್ಕ ಇಲ್ಲದಿದ್ದರೆ ಅಂತಹ ಗ್ರಾಮಗಳಿಗೆ ಆದ್ಯತೆಯನ್ನು ಕೊಟ್ಟು ರಸ್ತೆ ಸಂಪರ್ಕವನ್ನು ಕಲ್ಪಿಸಿಕೊಡಬೇಕೆಂಬುದು ಸರ್ಕಾರದ ಉದ್ದೇಶ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ಸಾಗರ ತಾಲ್ಲೂಕಿನಲ್ಲಿ ಮಿನಿಮಮ್ ನೀಡ್ ಪ್ರೋಗ್ರಾಂನಲ್ಲಿ ಎಷ್ಟು ರಸ್ತೆಗಳನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಎಸ್. ಬಂಗಾರಪ್ಪ.—ಒಂದು ರಸ್ತೆಯನ್ನು ತೆಗೆದುಕೊಂಡಿದೆ ಎಂದು ಉತ್ತರದಲ್ಲಿ ಕೊಡಲಾಗಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈ ಕಾರ್ಯ ಸ್ಥಗಿತವಾಗಿದೆ ಇದಕ್ಕೆ ಕಾರಣ ಏನು ಸ್ವಾಮಿ ?

ಶ್ರೀ ಎಸ್. ಬಂಗಾರಪ್ಪ.—ಹಣಕಾಸಿನ ಒಂದು ತೊಂದರೆ ಇರುವುದರಿಂದ ಇದನ್ನು ಹಂತ ಹಂತವಾಗಿ ಕಾರ್ಯಗತ ಮಾಡಬೇಕಾಗುತ್ತದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಎಷ್ಟು ಸಮಯದಲ್ಲಿ ಇದನ್ನು ಸಂಪೂರ್ಣ ಮಾಡುತ್ತೀರಾ ಸ್ವಾಮೀ ?

ಶ್ರೀ ಎಸ್. ಬಂಗಾರಪ್ಪ.—ಇಷ್ಟೇ ಸಮಯದಲ್ಲಿ ಸಂಪೂರ್ಣ ಮಾಡುತ್ತೇವೆ ಎಂದು ಹೇಳುವುದಕೆ ಬರುವುದಿಲ್ಲಾ. ಇದಕ್ಕೆ ಕೇಂದ್ರ ಸರ್ಕಾರದ ಹಣ ಸಿಕ್ಕಿದ ಹಾಗೆಲ್ಲಾ ಮುಂಗಿಸಬೇಕಾಗುತ್ತದೆ. ಗ್ಯಾರಂಟಿ ಹೇಳುವುದಕ್ಕೆ ಬರುವುದಿಲ್ಲಾ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈ ಬಗ್ಗೆ ಏನಾದರೂ ಸೊರಬಾ ತಾಲ್ಲೂಕಿಗೂ ಮತ್ತು ಸಾಗರ ತಾಲ್ಲೂಕಿಗೂ ತಾರತಮ್ಯ ಇದೆಯೇ ಸ್ವಾಮಿ ?

ಶ್ರೀ ಎಸ್, ಬಂಗಾರಪ್ಪ.—ಈ ಪ್ರಶ್ನೆಯಲ್ಲಿ ಸಾಗರ ತಾಲ್ಲೂಕಿನಲ್ಲಿ ಕನಿಷ್ಠ ಅಗತ್ಯತೆಯ ಕಾರ್ಯಕ್ರಮದ ಮೇರೆಗೆ ರಚಿಸಲಾದ ರಸ್ತೆಗಳು ಅಂತ ಇರುವುದರಿಂದ ತಾವು ಕೇಳತಕ್ಕಂಥಾ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಬರುವುದಿಲ್ಲಾ.

Foot bridge in Malnad area.

374 SRI S. M. SHEERNALY CHANDRASEKHAR (Hosanagar).—Will the Minister for Public Works be pleased to state,—

(a) whether the Government are aware of the necessity of foot bridges in Malnad area of the State ?

(b) if so, whether Government have given instructions to the Officers concerned to take up the work of construction of foot bridges immediately.